**ಓ.ಎಸ್. ನಂಃ 178/2020**

**ಪಿ.ಡಬ್ಲ್ಯೂಃ 2**

**ದಿನಾಂಕ 25.02.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ. ಬಿ.ಕೆ.ಎನ್ ವಕೀಲರಿಂದಃ**

13. ಅಸಲು ದಾವೆ ಸಂಖ್ಯೆ 105/2014 ರ ದಾವೆಯನ್ನು 1 ರಿಂದ 3 ನೇ ಪ್ರತಿವಾದಿಯರು ರಾಮಶೆಟ್ಟಿ ಎನ್ನುವವರ ವಿರುದ್ಧ ಹೂಡಿರುತ್ತಾರೆ. ಸದರಿ ದಾವೆಯನ್ನು ದೊಡ್ಡತಾಯಮ್ಮರವರು ಮುತ್ತೇಗೌಡರ ಮಗ ಕಾಳೇಗೌಡರಿಂದ ಖರೀದಿಸಿದ ಆಸ್ತಿಯ ಸಂಬಂಧ ಹೂಡಿದ್ದರು. 1 ರಿಂದ 3 ನೇ ಪ್ರತಿವಾದಿಯರು ಹೂಡಿದ್ದ ಅಸಲು ದಾವೆ ಸಂಖ್ಯೆ 105/2014 ರ ದಾವೆಯಲ್ಲಿ 4 ರಿಂದ 6 ನೇ ಪ್ರತಿವಾದಿಯರು ಅವರ ಪರ ಸಾಕ್ಷಿಯನ್ನು ನುಡಿದಿದ್ದರು.

14. ಅಸಲು ದಾವೆ ಸಂಖ್ಯೆ 105/2014 ರ ದಾವೆಯ 1 ನೇ ಪ್ರತಿವಾದಿಯಾದ ರಾಮಶೆಟ್ಟಿ ಬಿನ್ ಅಪ್ಪಾಜಿಶೆಟ್ಟರವರು ನನ್ನ ತಾಯಿಯ ತಂದೆ ಅಂದರೆ ನನ್ನ ತಾತನಾಗಿರುತ್ತಾರೆ. ಅಸಲು ದಾವೆ ಸಂಖ್ಯೆ 105/2014 ರ ದಾವೆಯಲ್ಲಿ ನನ್ನ ತಾತನಾದ ರಾಮಶೆಟ್ಟಿ ಬಿನ್ ಅಪ್ಪಾಜಿಶೆಟ್ಟರವರು ನುಡಿದಿರುವ ಸಾಕ್ಷಿಯು ಸತ್ಯವಾಗಿರುತ್ತದೆ. ಸದರಿ ದಾವೆಯಲ್ಲಿ ನಿಮ್ಮ ತಾತನಾದ ರಾಮಶೆಟ್ಟಿ ಬಿನ್ ಅಪ್ಪಾಜಿಶೆಟ್ಟರವರು ತಮ್ಮ ಅಡ್ಡ ವಿಚಾರಣೆಯಲ್ಲಿ ನುಡಿದಿರುವ ವಿಷಯಗಳು ಸತ್ಯವಾಗಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ಸದರಿ ದಾವೆಯಲ್ಲಿ ನನ್ನ ತಾತ ಅಡ್ಡ ವಿಚಾರಣೆಯಲ್ಲಿ ನುಡಿದಿರುವ ವಿಷಯಗಳನ್ನು ಓದಿ ತಿಳಿದುಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಆದ್ದರಿಂದ ಅಸಲು ದಾವೆ ಸಂಖ್ಯೆ 105/2014 ರ ದಾವೆಯಲ್ಲಿ ರಾಮಶೆಟ್ಟಿ ಬಿನ್ ಅಪ್ಪಾಜಿಶೆಟ್ಟರವರು ತಮ್ಮ ಅಡ್ಡ ವಿಚಾರಣೆಯಲ್ಲಿ ನುಡಿದಿರುವ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿ.

15. ಅಸಲು ದಾವೆ ಸಂಖ್ಯೆ 105/2014 ರ ದಾವೆಯಲ್ಲಿ ನನ್ನ ತಾತನಾದ ರಾಮಶೆಟ್ಟಿ ಬಿನ್ ಅಪ್ಪಾಜಿಶೆಟ್ಟರವರು ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇದೆ. ನಿಪಿ.25 ರಲ್ಲಿ ನಿಶಾನೆಪಡಿಸಿರುವ ತಮ್ಮ ಅಡ್ಡ ವಿಚಾರಣೆಯಲ್ಲಿ ತಮ್ಮ ತಾಯಿಗೆ ಮೃತ್ಯು ಪತ್ರದ ಅಡಿಯಲ್ಲಿ ಆಸ್ತಿಗಳು ಬರುವ ಪೂರ್ವದಲ್ಲಿ ನನ್ನ ತಾತನಾದ ರಾಮಶೆಟ್ಟಿ ಬಿನ್ ಅಪ್ಪಾಜಿಶೆಟ್ಟರವರು ತಮಗೆ ನಾಡಪ್ಪನಹಳ್ಳಿ ಗ್ರಾಮದಲ್ಲಿ ಯಾವುದೇ ಆಸ್ತಿ ಇರಲಿಲ್ಲ ಎಂದು ನುಡಿದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾತ ಮೇಲೆ ಹೇಳಿದ ರೀತಿಯಲ್ಲಿ

ಸಾಕ್ಷಿಯನ್ನು ನುಡಿದಿದ್ದರು ಸಹ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16. ಅಸಲು ದಾವೆ ಸಂಖ್ಯೆ 105/2014 ರ ನಿಪಿ.25 ರ ಅಡ್ಡ ವಿಚಾರಣೆಯ ಮೊದಲನೇಯ ಪುಟದ ಕೊನೆಯ ಮೂರು ಸಾಲಿನಲ್ಲಿ ನಿಮ್ಮ ತಾತನಾದ ರಾಮಶೆಟ್ಟಿ ಬಿನ್ ಅಪ್ಪಾಜಿಶೆಟ್ಟಿರವರು *"ಸದರಿ ಪೋಟೋದಲ್ಲಿರುವ ಜಾಗದಲ್ಲಿ ವಾದಿಯರೇ ಸೌದೆಯನ್ನು ಹಾಕಿರುತ್ತಾರೆ"* ಎಂದು ಸಾಕ್ಷಿ ನುಡಿದಿರುತ್ತಾರೆ ಅಂತ ಇರುವುದನ್ನು ಓದಿ ಎಂದು ಸಾಕ್ಷಿಗೆ ಸೂಚಿಸಿದ್ದು, ಸಾಕ್ಷಿಯು ಸದರಿ ಸಾಲನ್ನು ಓದಿ ನನಗೆ ನಿಪಿ.25 ರ ಅಡ್ಡ ವಿಚಾರಣೆಯಲ್ಲಿ ನಮೂದಿಸಿರುವ ನಿಪಿ.6 ರ ಪೋಟೋವನ್ನು ನೋಡದೇ ನಿಮ್ಮ ಪ್ರಶ್ನೆಗೆ ಉತ್ತರ ಹೇಳಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ.

17. ದಿನಾಂಕ 16.04.1955 ರಲ್ಲಿ ನನ್ನ ಅಜ್ಜಿಯಾದ ದೊಡ್ಡತಾಯಮ್ಮರವರು ಮುತ್ತೇಗೌಡರ ಮಗ ಕಾಳೇಗೌಡರಿಂದ ಖರೀದಿಸಿದ ಆಸ್ತಿಯ ಸಂಬಂಧ ನಾವು ಈ ದಾವೆಯನ್ನು ಹೂಡಿರುತ್ತೇವೆ. ದಿನಾಂಕ 16.04.1955 ರ ಕ್ರಯ ಪತ್ರದ ಆಸ್ತಿಗೂ ಮತ್ತು ಈ ದಾವೆಯ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಪೌಂಡೇಷನ್ ಹಾಕಿರುತ್ತಾರೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಪೋಟೋಗಳನ್ನು ಹಾಜರುಪಡಿಸಬಲ್ಲೆ.

18. ದಾವಾ ಆಸ್ತಿಯ ವಿಸ್ತೀರ್ಣವನ್ನು ಸಾಭೀತುಪಡಿಸಲು ನನ್ನ ಬಳಿ ಪಂಚಾಯಿತಿ ಅಥವಾ ಕಂದಾಯ ದಾಖಲೆಗಳು ಇಲ್ಲದಿದ್ದರು ಸಹ ನಾನು ಸುಳ್ಳು ವಿಸ್ತೀರ್ಣವನ್ನು ನಮೂದಿಸಿ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕುಬಂಧಿ ದೃಢೀಕರಣ ಪತ್ರ ಇದೆ. ದಾವಾ ಆಸ್ತಿಯು ಮಾಯಿಗೌಡನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇದೆ ಎಂದು ಸಾಬೀತುಪಡಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**